ಸಿ.ಸಿ..ನಂ. 299–2022

ಪಿ.ಡಬ್ಲ್ಯೂ–1

ದಿನಾಂಕ.05–08–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎನ್ ಎಸ್ ಪಿ ವಕೀಲರಿಂದಃ

1. ಸ್ರಧ್ರಿ ಆರೋಪಿಯು ನಮ್ಮ ಬ್ಯಾಂಕಿನಲ್ಲಿ ಸಾಲ ಮಾಡಿರುತ್ತಾನೆ. ಆತನು ನಮ್ಮ ಸೊಸೈಟಿಯಲ್ಲಿ ವಾಹನದ ಸಾಲ ಮಾಡಿರುತ್ತಾನೆ . ಸ್ರಧ್ರಿ ವಾಹನಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ವಾಹನ ತೆಗೆದುಕೊಳ್ಳುವ ಪೂರ್ವದಲ್ಲಿ ಸಾಲದ ಅರ್ಜಿಯನ್ನು ಸಲ್ಲಿಸುವಾಗ ಆ ಸಾಲದ ಅರ್ಜಿಯಲ್ಲಿ ಆ ವಾಹನದ ನಂಬರವನ್ನು ನಮೂದು ಮಾಡಲಾಗಿರುತ್ತದಾ ಎಂದರೆ ಹೌದು ಆ ವಾಹನದ ನಂಬರವನ್ನು ನೋಟ್ ಮಾಡುವಾಗ ಆ ವಾಹನಕ್ಕೆ ಸಂಬಂಧಿಸಿದಂತೆ ದಾಖಾಲತಿಗಳನ್ನು ನೀವು ನೋಡಿರುತ್ತೀರಾ ಎಂದರೆ ಹೌದು . ಆ ವಾಹನಕ್ಕೆ ಸಂಬಂಧಿಸಿದಂತೆ ಇರುವ ದಾಖಲಾತಿಗಳನ್ನು ಅಡಮಾನಕ್ಕೆ ಇಟ್ಟು ಕೊಂಡು ಸಾಲವನ್ನು ನೀಡಲಾಗಿರುತ್ತದೆ. ಹಾಗಾದರೆ ಆ ವಾಹನಕ್ಕೆ ಸಂಬಂಂಧಿಸಿದಂತೆ ಇರುವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬೇಕೋ ಬೇಡವೊ ಎಂದು ನಿಮಗೆ ಗೊತ್ತಿರುತ್ತದಾ ಅಥವಾ ಇಲ್ಲವೊ ಎಂದರೆ ಅವಶ್ಯ ಇದ್ದಲ್ಲಿ ಹಾಜರು ಪಡಿಸುತ್ತೇಃನೆ . ಈ ಆರೋಪಿಯ ಮೇಲೆ ಯಾವ ವಿಚಾರಕ್ಕೆ ಸಂಬಧಿಸಿದಂತೆ ಈ ಪರಕರಣವನ್ನುದಾಖಲಿಸಿರುತ್ತೀರಿ ಎಂದರೆ ಆರೋಪಿಯ ವಾಹನ ಸಾಲದ ಚೆಕ್ ಬೌನ್ಸ ಪ್ರಕರಣಕ್ಕೆ ಸಬಂಧಿಸಿದಂತೆ ಪ್ರಕರಣವನ್ನು ದಾಖಲಿಸಲಾಗಿರುತ್ತದೆ . ನೀವು ಉದ್ದೇಶಪೂರಕವಾಗಿ ವಾಹನಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಅವಶ್ಯ ಇದ್ದಲ್ಲಿ ಹಾಜರು ಪಡಿಸುತ್ತೇನೆ . ಹಾಗಾದರೆ ವಾಹನಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರು ಪಡಿಸುವ ಅವಶ್ಯ ಇಲ್ಲ ಎಂದು ನಿವೇ ತಿಳಿದುಕೊಂಡಿರುತ್ತೀರಿ ಎಂದರೆ ಚೆಕ್ ಬೌನ್ಸ ಪ್ರಕರಣವಾಗಿದ್ದರಿಂದ ಹಾಜರು ಪಡಿಸಿಲ್ಲ .

2. ಚೆಕ್ ಬೌನ್ಸ ಪ್ರಕರಣ ಎಂಬುದು ವಾಹನ ಸಾಲಕ್ಕೆ ಸಂಬಂಧಿಸಿದ ಪ್ರಕರಣವಾಗಿರುತ್ತದೆ ಎಂದರೆ ಸರಿ . ಹಾಗಾದರೆ ಚೆಕಿ ಬೌನ್ಸ ಪ್ರಕರಣಕ್ಕೆ ಆ ವಾಹನ ಸಾಲಕ್ಕೆ ಸಂಬಂಧಿಸಿದಂತೆ ಆ ವಾಹನದ ದಾಖಲಾತಿಗಳಲ್ಲಿ ಹಾಜರು ಪಡಿಸಬಾರದು ಎಂಬ ಬಗ್ಗೆ ನಿಮಗೆ ಗೊತ್ತಿರುತ್ತದೆ ಎಂದರೆ ಅವಶ್ಯ ಇದ್ದರೆ ಹಾಜರು ಪಡಿಸುತ್ತೇನೆ ಆರೋಪಿಯು ನಿಮ್ಮ ಸಂಸ್ಥೆಯಿಂದ ಯಾವುದೇ ಸಾಲವನ್ನು ತೆಗೆದಿಲ್ಲ . ಆದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಲದ ಅರ್ಜಿಯನ್ನು ಹಾಜರು ಪಡಿಸಿರುತ್ತೀರಿ ಎಂದರೆ ಸರಿಯಲ್ಲ .

3. ಸಾಲವನ್ನು ಕೊಡುವಲ್ಲಿ ಆರೋಪಿಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ತಿಳಿದುಕೊಂಡಿರುತ್ತೇವೆ . ಈ ಆರೋಪಿಯ ಮೇಲೆ ಸಾಲದ ಬಗ್ಗೆ ಅಂಕೋಲಾ ತಾಲೂಕಿನಲ್ಲಿ ಒಟ್ಟು ಎಷ್ಟು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಒಂದು ಚೆಕ್ ಬೌನ್ಸ ಪ್ರಕರಣ ಇನ್ನೊಂದು ಸಿವಿಲ್ ಪ್ರಕರಣವಾಗಿರುತ್ತದೆ . ಆರೋಪಿಯು ನಮ್ಮ ಬ್ಯಾಂಕಿನಲ್ಲಿ ಒಟ್ಟು ಒಂದೇ ಸಲಕ್ಕೆ ರೂ 3 ಲಕ್ಷ ರೂಪಾಯಿ ವಾಹನ ಸಾಲವನ್ನು ಪಡೆದುಕೊಂಡಿರುತ್ತಾನೆ . ಆರೋಪಿಯು ವಿರುದ್ಧ ಸಿವಿಲ್ ಪ್ರಕರಣ ಮಾಡಿದ್ದರ ಬಗ್ಗೆ ನಿಮಗೆ ಮಾಹಿತಿ ಇರುತ್ತದೆಯಾ ಎಂದರೆ ಮಾಹಿತಿ ಇರುತ್ತದೆ ಆದರೆ ಕೇಸ್ ನಂಬರ ನೆನಪಿಲ್ಲ ಪ್ರಿನ್ಸಿಪಲ್ ಸಿವಿಲ್ ಕೊರ್ಟ ದಲ್ಲಿ ಸಿವಿಲ ದಾವೆ ದಾಖಲಾಗಿರುತ್ತದೆ . ಸಿವಿಲ್ ದಾವೆಯನ್ನು ಎಷ್ಟು ಹಣಕ್ಕೆ ಮಾಡಲಾಗಿರುತ್ತದೆ ಎಂಬ ಬಗ್ಗೆ ನನಗೆ ನೆನಪಿಲ್ಲ . ಆರೋಪಿಯ ಮನೆಯಲ್ಲಿ ಒಬ್ಬ ಮಗ , ಅವರ ಹೆಂಡತಿ ಮತ್ತು ಆರೋಪಿ ಇರುತ್ತಾರೆ . ಆರೋಪಿಯು ಸಾಲವನ್ನು ಪಡೆದುಕೊಳ್ಳಬೇಕಾದರೆ ಅವರ ಮನೆಯಲ್ಲಿ ಯಾರು ಯಾರು ಎಷ್ಟು ಹಣವನ್ನು ಸಂಪಾದಿಸುತ್ತಾರೆ ಹಾಗೂ ಅವರ ಆರ್ಥಿಕ ಪರಿಸ್ದಿತಿ ಎಷ್ಟಿರುತ್ತದೆ ಎಂದು ನೀವು ವಿಚಾರ ಮಾಡಿರುತ್ತೀರಿ ಎಂದರೆ ಅದನ್ನು ಸಾಲಗಾರನ ಬಳಿ ಕೇಳಿ ತಿಳಿದುಕೊಂಡಿರುತ್ತೇವೆ . ಸದ್ರಿ ಸಾಲಕ್ಕೆ ಸಂಬಧಿಸಿದಂತೆ ಜಾಮಿನುದಾರರನ್ನಾಗಿ ಆರೋಪಿ ಮಗ ಮತ್ತು ಆರೋಪಿ ಹೆಂಡತಿಯನ್ನು ಮಾಡಲಾಗಿರುತ್ತದೆ .ಆರೋಪಿಯ ಹೆಂಡತಿ ಕಾಯಿಲೆಯಿಂದ ಬಳಲುತ್ತಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಹೆಂಡತಿಯ ಅನಾರೋಗ್ಯದ ಸಲುವಾಗಿ ಆರೋಪಿಯು ಪ್ರತಿದಿನವೂ ಅವಳ ಚಿಕಿತ್ಸೆಗಾಗಿ ಖರ್ಚು ಮಾಡುತ್ತಿರುವುದು ನಿಮಗೆ ಗೊತ್ತಿರುತ್ತದೆ ಎಂದರೆ ಇಲ್ಲ . ಸಾಲದ ಅರ್ಜಿಯಲ್ಲಿ ಬರೆದಿರುವ ವಿಷಯವನ್ನು ಎಲ್ಲಾ ನಿವೇ ಬರವಣಿಗೆ ಮಾಡಿದ್ದು ಎಂದರೆ ಇಲ್ಲ. ಸಾಲದ ಅರ್ಜಿಯಲ್ಲಿ ಬಿಟ್ಟ ಸ್ದಳದಲ್ಲಿ ತುಂಬಲು ಮಾಹಿತಿಯನ್ನು ನೀವು ಕೊಡಲಿಲ್ಲ ಎಂದರೆ ಸಾಲಗಾರನೆ

ಅದನ್ನು ಬರೆದುಕೊಟ್ಟಿರುತ್ತಾನೆ. ಸಾಲದ ಅರ್ಜಿಯನ್ನು ಸಂಪೂರ್ಣವಾಗಿ ಅವರೆ ಬರೆದುಕೊಟ್ಟಿರುತ್ತಾರೆ ಕರಾರನ್ನು ನಾವು ಬರೆದುಕೊಟ್ಟಿರುತ್ತೇವೆ. ಸಾಲದ ಅರ್ಜಿಯನ್ನು ಸಂಪೂರ್ಣವಾಗಿ ಅವರೆ ಬರೆದುಕೊಟ್ಟಿರುತ್ತಾರೆ . ಕರಾರು ಪತ್ರವನ್ನು ನಮ್ಮ ಬ್ಯಾಂಕಿನಲ್ಲಿ ಯಾವ ಸಿಬ್ಬಂದಿಗಳು ಬರೆದಿರುತಾತರೆ ಎಂದು ನನಗೆ ನೆನಪಿಲ್ಲ. ಕರಾರು ಪತ್ರದಲ್ಲಿ ಬರೆದಿರುವ ಬರವಣಿಗೆ ಮತ್ತು ಸಾಲದ ಅರ್ಜಿಯಲ್ಲಿ ಬರೆದಿರುವ ಬರವಣಿಗೆ ಒಂದೆ ತರವಾಗಿರುತ್ತದೆ ಎಂದರೆ ಇಲ್ಲ. ಸಾಲದ ಅರ್ಜಿಯಲ್ಲಿ ಇರುವ ಬರವಣಿಗೆಯನ್ನು ನಿಮ್ಮ ಸಂಸ್ಥೆಮ್ರಲ್ಲಿರುವ ಸಿಬ್ಬಬಂದಿಗಳು ಬರೆದಿದ್ದರೂ ಸಹ ಕರಾರು ಪತ್ರವನ್ನು ಮಾತ್ರ ನಮ್ಮ ,ಸಿಬ್ಬಂದಿ ಬರೆದಿದ್ದು ಸಾಲದ ಅರ್ಜಿಯನ್ನು ಅರ್ಜಿದಾರರೆ ಬರೆದಿದ್ದು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ವಾಹನ ಖರೀದಿ ಸಾಲದ ಅರ್ಜಿ ಯಲ್ಲಿ ನಿವೇ ಬರವಣಿಗೆ ಮಾಡಿದ್ದು ಎಂದು ಮಾಹಿತಿ ತಿಳಿದು ಬರುತ್ತಿದೆ ಎಂದರೆ ಸರಿಯಲ್ಲ. ನಾವು ಸಾಲವನ್ನು ನೀಡುವಾಗ ಒಳ್ಳೆಯ ಜಾಮೀನುದಾರರ ಬದ್ರತೆಯನ್ನು ಪಡೆದುಕೊಳ್ಳುತ್ತೀರಿ ಎಂದರೆ ಸರಿ. ಒಂದು ವೇಳೆ ಸಾಲಗಾರರು ಸಾಲವನ್ನು ಮರು ಪಾವತಿ ಮಾಡದೇ ಇದ್ದರೆ ಜಾಮಿನುದಾರರು ಸದ್ರಿ ಸಾಲವನ್ನು ಮರು ಪಾವತಿ ಮಾಡಲು ಬಾದ್ಯಸ್ಥ ರು ಎಂದು ಬರೆದುಕೊಂಡಿರುತ್ತೀರಿ ಎಂದರೆ ನಾನು ಸರಿಯಾಗಿ ಓದಿಲ್ಲ . ನಿಮಗೆ ಈ ಸಾಕ್ಷ್ಯವನ್ನು ನುಡಿಯಲು ಬಂದಿದ್ದರೂ ಸಹ ನಿಮಗೆ ಈ ಸಾಲದ ಅರ್ಜಿಯ ಬಗ್ಗೆ ಮತ್ತು ಈ ಪರಕರಣ ಬಗ್ಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸಾಲದ ಅರ್ಜಿಯಲ್ಲಿ ಮತ್ತು ಕರಾರು ಪತ್ರದಲ್ಲಿ ಏನೆಲ್ಲಾ ಬರೆದಿರುತ್ತದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ನನಗೆ ಗೊತ್ತಿದೆ . ಹಾಗಾದರೆ ನೀವು ಕರಾರು ಪತ್ರದಲ್ಲಿ ಬರೆದಿರುವ ವಿಷಯಗಳು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ .

4. ಆರೋಪಿಗೆ ದಿಃ 10-01-2017 ರಂದು ನೀಡಲಾಗಿರುತ್ತದೆ. ಸಾಲದ ಅರ್ಜಿಯನ್ನು ಆರೋಪಿಯು ದಿಃ 26-12-2016 ರಂದು ನೀಡಿರುತ್ತಾನೆ . ಸಾಲದ ಅರ್ಜಿಯನ್ನು ನೀಡಿದ ಎಷ್ಟು ದಿನಗಳ ಬಳಿಕ ಆರೋಪಿಗೆ ಸಾಲವನ್ನು ಕೊಟ್ಟಿರುತ್ತೀರಿ ಎಂದರೆ 15 ದಿನಗಳನ್ನು ಬಿಟ್ಟು ಸಾಲವನ್ನು ಕೊಡಲಾಗಿರುತ್ತದೆ .

5. ಅಂಬಿಕಾ ಪತ್ತಿನ ಸಹಕಾರಿ ಸಂಘಕ್ಕೆ ಒಂದು ಕಮಿಟಿ ಇರುತ್ತದೆ ಎಂದರೆ ಸರಿ .ಅದರಲ್ಲಿ 10 ಜನ ಡೈರೆಕ್ಟರ ಅಧ್ಯಕ್ಷರು ಉಪಾಧ್ಯಕ್ಷರು ಇರುತ್ತಾರೆ . ಸದ್ರಿ ಸಾಲದ ಅರ್ಜಿಯನ್ನು ಕಮಿಟಿಯ ಮುಂದೆ ಇಟ್ಟು ಠರಾವನ್ನು

ಪಾಸು ಮಾಡಿಕೊಳ್ಳಲಾಗುತ್ತದೆ . ಸದ್ರಿ ಠರಾವಿನಲ್ಲಿ ಆ ಕಮಿಟಿಯವರು ಸಾಲವನ್ನು ಆರೋಪಿಗೆ ಕೊಡಬಹುದು ಎಂದು ಬರೆದಿರುತ್ತಾರೆ ಎಂದರೆ ಸಾಲದ ಅರ್ಜಿಯಲ್ಲಿ ಕಮಿಟಿಯಮರು ಬರೆದುಕೊಟ್ಟಿಲ್ಲ ಅದಕ್ಕೆ ಠರಾವು ಇರುತ್ತದೆ. ದಿನಾಂಕವನ್ನು ನಮೂದಿಸಿರುತ್ತಾರೆ . ಸಾಲದ ಅರ್ಜಿಯನ್ನು ಕಮಿಟಿಯ ಮುಂದೆ ಇಟ್ಟಿದ್ದರ ಬಗ್ಗೆಯಾಗಲಿ ಸಾಲ ಮಂಜೂರು ಮಾಡಲು ನೀಡಿದ ಯಾವುದಾದಾರೂ ದಾಖಲಾತಿಯಲ್ಲಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೀರಾ ಎಂದರೆ ಠರಾವು ವನ್ನು ಹಾಜರು ಪಡಿಸಿರುತ್ತೇನೆ . ಸದ್ರಿ ಆರೋಪಿಗೆ ಸಾಲವನ್ನು ಮಂಜೂರು ಮಾಡಲು ಕಮಿಟಿಯವರು ಲಿಖಿತ ರೂಪದಲ್ಲಿ ಬರೆದದ್ದು ಸಾಲದ ಅರ್ಜಿಯಲ್ಲಾಗಲಿ ಅಥವಾ ಠರಾವಿನಲ್ಲಾಗಲಿ ಇರುವುದಿಲ್ಲ . ಮತ್ತು ಕಮಿಟಿಯವರು ಸಹಿ ಕೂಡ ಹಾಕಿರುವುದಿಲ್ಲ ಎಂದರೆ ಠರಾವು ಇರುತ್ತದೆ . ಅವರ ಲಿಖಿತ ರೂಪದ ಬರವಣಿಗೆ ಇರುವುದಿಲ್ಲ. ಅಧ್ಯಕ್ಷರ ಮತ್ತು ವ್ಯವಸ್ಥಾಪಕರ ಸಹಿ ಸಾಲದ ಅರ್ಜಿಯಲ್ಲಿ ಇರುತ್ತದೆ. ಸಾಲದ ಅರ್ಜಿಯಲ್ಲಿ ಅಧ್ಯಕ್ಷರ ಸಹಿ ಎಲ್ಲಿರುತ್ತದೆ ಎಂದು ಸಾಕ್ಷಿಗೆ ಸದ್ರಿ ಸಾಲದ ಅರ್ಜಿಯನ್ನು ಕೊಡಲಾಗಿದ್ದು ಸಾಕಿ ಸದ್ರಿ ಸಾಲದ ಅರ್ಜಿಯನ್ನು ನೋಡಿ ಅದರಲ್ಲಿ ಅಧ್ಯಕ್ಷರ ಮತ್ತು ವ್ಯವಸ್ಥಾಪಕರ ಇಬ್ಬರ ಸಹಿ ಇರುತ್ತದೆ ಎಂದು ನುಡಿಯುತ್ತಾರೆ . ಸದ್ರಿ ಅಧ್ಯಕ್ಷರ ಮತ್ತು ವ್ಯಸ್ಥಾಪಕರ ಸಹಿಗಳನ್ನು ನಿಪಿ–7 (ಎ) ಮತ್ತು 7 (ಬಿ) ಎಂದು ಗುರುತಿಸಲಾಯಿತು . ಸಾಲವನ್ನು ನೀಡುವಾಗ ಕಮಿಟಿಯ ಬಹು ಸದಸ್ಯರ ಒಪ್ಪಿಗೆ ಮೇರೆಗೆ ಸಾಲವನ್ನು ಕೊಡುತ್ತೀರಿ ಎಂದರೆ ಸರಿ . ಸದ್ರಿ ಸಾಲದ ಅರ್ಜಿಯಲ್ಲಿ ಆ ಕಮಿಟಿಯ ಸದಸ್ಯರ ಸಹಿ ಇರುವುದಿಲ್ಲ. ಬರಿ ಅಧ್ಯಕ್ಷರ ಸಹಿ ಮಾತ್ರ ಇರುತ್ತದೆ ಎಂರದೆ ಅಧ್ಯಕ್ಷರು ಮತ್ತು ವ್ಯವಸ್ಥಾಪಕರ ಸಹಿ ಇರುತ್ತದೆ ಎಂದು ನುಡಿಯುುತ್ತಾರೆ . ವ್ಯವಸ್ಥಾಪಕರಿಗೆ ಪ್ರತ್ಯೇಕವಾದ ಶೀಲು ಇರುತ್ತದೆ ಎಂದರೆ ಸರಿ . ಅದೇ ಅಧ್ಯಕ್ಷರಿಗೂ ಒಂದು ಶೀಲು ಇರುತ್ತದೆ ಎಂದರೆ ಸರಿ . ಸದ್ರಿ ಸಾಲದ ಅರ್ಜಿಯಲ್ಲಿ ಅಧ್ಯಕ್ಷರ ಮತ್ತು ವ್ಯವಸ್ಥಾಪಕರ ಶೀಲು ಇರುವುದಿಲ್ಲ . ಹಾಗಾದರೆ ನಿಮಗೆ ಅಧ್ಯಕ್ಷರ ಮತ್ತು ವ್ಯವಸ್ಥಾಪಕರು ಸದ್ರಿ ಸಾಲದ ಅರ್ಜಿಯಲ್ಲಿ ಶಿಲು ಹಾಕಿದ್ದರ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅಧ್ಯಕ್ಷರು ಮತ್ತು ವ್ಯವಸ್ಥಾಪಕರ ಸಹಿ ಹಾಕಿರುತ್ತಾರೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಸಾಲದ ಅರ್ಜಿಯ ಮೇಲೆ ವ್ಯವಸ್ಥಾಪಕರು ಮತ್ತ ಅಧ್ಯಕ್ಷರು ಶೀಲು ಹಾಕಬೇಕು ಎಂಬ ಬಗ್ಗೆ ಮಾಹಿತಿ ಕೂಡ ನಿಮಗೆ ಇಲ್ಲ ಎಂರದೆ ಸರಿಯಲ್ಲ . ನೀವು ಉದ್ದೇಶಪೂರಕವಾರಗಿ ಸೃಷ್ಟಿಸಿದ ನಿಪಿ–7 ದಾಖಲಾತಿಯನ್ನು

ಹಾಜರು ಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ದಾಖಲಾತಿಯನ್ನು ಹಾಜರು ಪಡಿಸುವುದು ಅಪರಾಧ ಎಂದು ಗೊತ್ತಿದ್ದರೂ ಸಹ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ . .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.